ಅತ್ತೆ ಮನೆಯವರಿಗೆ ಇಷ್ಟ ಇರಲಿಲ್ಲ.

ಮಗಳು ವಿಧವೆಯಾಗಿ ಬಂದದ್ದು ನೋಡಿ ಅಭಯಪದರ ಹೃದಯ ಒಡೆದುಹೋಯಿತು. ಅವರ ಆರೋಗ್ಯ ನಿಧಾನವಾಗಿ ಕುಸಿಯತೊಡಗಿತು. ಮಗ ಸುದೀಪ್ತನಿಗೆ ಇನ್ನೂ ನಾಲ್ಕು ವರ್ಷ, ಅವರು ನಿಧನರಾದರು. ಅವರು ಏನೂ ಇಟ್ಟಿರಲಿಲ್ಲ; ಹೇಗೆ ಸಂಪಾದನೆ ಮಾಡಿದ್ದರೋ ಹಾಗೆ ಖರ್ಚೂ ಮಾಡಿಬಿಟ್ಟಿದ್ದರು. ಆದ್ದರಿಂದ ಅಮಿಯಲತಾದೇವಿಯವರು ಮನೆ ಮಾರಿ ಅಲ್ಲಿಯೇ ಸಣ್ಣದೊಂದು ಮನೆಯನ್ನು ಬಾಡಿಗೆಗೆ ಹಿಡಿದರು. ಮನೆ ಮಾರಿ ಬಂದ ಹಣವನ್ನು ಪೋಸ್ಟ್ ಆಫೀಸಿನಲ್ಲಿಟ್ಟು ಅದರಿಂದ ಬರುವ ಬಡ್ಡಿ ಹಣದಲ್ಲಿ ಹೇಗೋ ಮನೆ ನಡೆಸುತ್ತಿದ್ದರು. ಅವರ ಬಡತನಕ್ಕೆ ಭಾರವಾಗಿ ಮಾಧವಿಲತಾನೂ ಸೇರಿಕೊಂಡಿದ್ದರು. ತಾಯಿ ಕೂತಲ್ಲಿ ನಿಂತಲ್ಲಿ ಮಗಳಿಗೆ ಶಾಪ ಹಾಕುತ್ತಿದ್ದರು. ನೀನು ಬದುಕಿರೋ ಬದಲು ಗಂಗೆಯಲ್ಲಿ ಮುಳುಗಿ ಸಾಯಿ ಅಂತ ಕೂಡ ಬೈಯುತ್ತಿದ್ದರು. ನಿಜವಾಗಿ, ಬರುವ ಅಲ್ಪ ಬಡ್ಡಿ ಹಣದಲ್ಲಿ ಸುದೀಪ್ತನನ್ನು ಸ್ಕೂಲಿಗೆ ಕಳಿಸ್ಕೊಂಡು ಮನೆ ನಡೆಸೋಕೆ ಕಷ್ಟ ಆಗ್ತಾಯಿತ್ತು.

ಮಾಧವಿಲತಾರ ಒಬ್ಬ ಮಾಮ ಅವಳನ್ನು ತುಂಬಾ ಪ್ರೀತಿಸುತ್ತಿದ್ದರು. ಒಂದು ದಿನ ಆ ಮಾಮ ಮನೆಗೆ ಬಂದಾಗ ಮಾಧವಿಲತಾ ಅವರಿಗೆ ತೆಕ್ಕೆ ಬಿದ್ದು ಅಳೋಕೆ ಶುರು ಮಾಡಿದಳು; 'ನನ್ನನ್ನು ನಿಮ್ಮ ಮನೆಗೆ ಕರ್ಕೊಂಡು ಹೋಗಿ, ನಾನು ನಿಮ್ಮ ಜೊತೆ ಬರ್ತೀನಿ' ಅಂತ. 'ನಿನ್ನನ್ನ ನಮ್ಮನೆಗೆ ಕರ್ಕೊಂಡು ಹೋಗೋಕಾಗಲ್ಲ, ನಿನ್ನ ಮಾಮಿಗೆ ಇಷ್ಟು ದೊಡ್ಡ ಜವಾಬ್ದಾರಿ ತಗೊಳೊಕೆ ಆಗಲಮ್ಮ' ಅಂದ ಮಾಮ, ಬೇರೆ ದಾರಿ ಕಾಣದೆ ಮಾಧವಿಲತಾರನ್ನು ಕಾಶಿಯ ಕೇದಾರನಾಥ್ ಘಾಟದ ಮಂದಿರಲ್ಲಿ ಬಿಟ್ಟಿದ್ದರು. ಮಾಮಿಯ ಒಬ್ಬ ವಿಧವೆ ಮಾಸಿ (ತಾಯಿಯ ಸೋದರಿ) ಆಗ ಆ ಮಂದಿರಲ್ಲಿದ್ದರು.

ಕಾಶಿಯಲ್ಲಿ ಮಾಧವಿಲತಾರ ಜೀವನದ ಹೊಸ ಅಧ್ಯಾಯ ಶುರುವಾಯಿತು. ಮಂದಿರದ ಅಂಗಳದ ಕಸ ಗುಡಿಸುತ್ತಿದ್ದುದರಿಂದ ದಿನಕ್ಕೆ ಎರಡು ತುತ್ತು ಅನ್ನಕ್ಕೆ ದಾರಿಯಾಯಿತು. ಮಂದಿರದಲ್ಲಿದ್ದ ಕೃಷ್ಣನಿಗೆ ತಮ್ಮನ್ನು ತಾವು ಸಂಪೂರ್ಣವಾಗಿ ಅರ್ಪಿಸಿಕೊಂಡರು. ಇತ್ತ ಸುದೀಪ್ತ ಸ್ಕೂಲ್ ಮುಗಿಸಿ ಕಾಲೇಜಿಗೆ ಕಾಲಿಟ್ಟ; ಆ ವರ್ಷವೇ ಅಮ್ಮ ನಿಧನರಾದರು, ಅವನು ಸಂಪೂರ್ಣ ಒಂಟಿಯಾದ. ಸಂಸಾರ ನಡೆಸೋದು ಹೇಗೆ? ಸುದೀಪ್ತ ಕಾಶಿಯಲ್ಲಿರುವ ಅಕ್ಕನ ಬಳಿ ಓಡಿದ. ಅವರನ್ನು ವಾಪಸು ಕರೆದುಕೊಂಡು ಬರುವ ಅಗತ್ಯವಿತ್ತು. ಹದಿನಾಲ್ಕು ವರ್ಷಗಳ ದೀರ್ಘಾವಧಿಯ ನಂತರ ಮಾಧವಿಲತಾ ಚಂದನ್ ನಗರದ ಮನೆಗೆ ಮರಳಿ ಬಂದರು. ಬರುತ್ತಿದ್ದ ಅಲ್ಪ ಆದಾಯದಲ್ಲೇ ಮನೆ, ತಮ್ಮನ ಓದು ಬರಹ ಎಲ್ಲ ತೂಗಿಸಿಕೊಂಡು ಹೋಗಬೇಕಾಯಿತು. ಬಹುಕಾಲದಿಂದ ಮನೆಯ ಕೆಲಸಕ್ಕಿದ್ದ ಒಬ್ಬಳೇ ಕೆಲಸದವಳನ್ನ ಬಿಡಿಸಿ ಎಲ್ಲಾ ಕೆಲಸವನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡರು.

ಈ ಎಲ್ಲಾ ಕತೆನಾ ಜಯಾ ಹೇಳಲಿಲ್ಲ, ಮಾಧವಿದಿಯ ಬಾಯಿಂದಾನೇ ರಿಯಾ ಕೇಳಿದ್ದಳು. ಒಂದು ದಿನ ಸೋಮೇನನದು ಬನಿಯನ್ ಗಾಳಿಗೆ ಹಾರಿ ಕೆಳ ಜಗಲಿ ಮೇಲೆ ಬಿದ್ದಿತ್ತು. ರಿಯಾ ಬನಿಯನ್ ತರಲು ಕೆಳಗೆ ಹೋದಾಗ ನೋಡಿದಳು, ಮಾಧವಿಲತಾ ಬಾಲ್ಕನಿಯ ಎಡ ಮೂಲೆಯಲ್ಲಿ ಕುಳಿತಿದ್ದರು. ಎಡಕೈಯಲ್ಲಿ ಒಂದು ಸಣ್ಣ ಕನ್ನಡಿ ಮುಖಕ್ಕೆ ಹಿಡಿದು ಬಲಗೈಯಲ್ಲಿ ಮೂಗಿಂದ ಹಣೆವರೆಗೆ ತಿಲಕಮುದ್ರೆ ಇಡುತ್ತಿದ್ದರು. ರಿಯಾಳನ್ನು ನೋಡಿ ಮಾಧವಿಲತಾ ಅವಳನ್ನ ಹತ್ತಿರ ಕರೆದರು. ಆಮೇಲೆ ಒಂದು ಚಾಪೆ ತಂದು ಹಾಸಿ ಅವಳಿಗೆ ಕೂರಲು ಸನ್ನೆ ಮಾಡಿ, 'ಇಡೀ ದಿನ ನಿನ್ನ ನೋಡೋಕೆ ಆಗಲ್ಲ. ನೀನೂ ಕೆಳಗೆ ಬರಲ್ಲ, ನನಗೂ ಟೈಮಿಲ್ಲ' ಅಂತ ಮಾತಿಗೆ ಶುರುಮಾಡಿದರು. ಆ ದಿನ ರಿಯಾಳಿಗೆ ಅವರ ಜೀವನದ ಅನೇಕ ಕತೆ ಹೇಳಿದರು ಮಾಧವಿಲತಾ.

ಸುದೀಪ್ತ ಎಂ.ಕಾಂ. ಪಾಸು ಮಾಡಿದ ಮೇಲೆ ಸ್ವಲ್ಪ ದಿನ ಅದೂ ಇದೂ ಮಾಡಿ ಕೊನೆಗೆ ಒಂದು ಎನ್‌ಜಿಓದಲ್ಲಿ ಕೆಲಸ ಗಿಟ್ಟಿಸಿಕೊಂಡ. ಜಯಾ ಕೂಡ ಅಲ್ಲೇ ಕೆಲಸ ಮಾಡ್ತಾಯಿದ್ರು. ಜೊತೆಯಲ್ಲಿ ಕೆಲಸ ಮಾಡ್ತಾ ಮಾಡ್ತಾ ಅವರಿಬ್ಬರೂ ಮದುವೆ ಮಾಡಿಕೊಳ್ಳೋಕೆ ನಿರ್ಧರಿಸಿದರು. ಮಾಧವಿಲತಾನೇ ಸ್ವತಃ ಮುಂದೆ ನಿಂತು ಅವರ ಮದುವೆ ಮಾಡಿದರು. ಮದುವೆಯಾದ ಕೆಲವು ತಿಂಗಳೊಳಗೆ ಅವರ ಸಂಸಾರಕ್ಕೆ ಮಾಧವಿಲತಾ ಭಾರ ಅನಿಸತೊಡಗಿತು. ಅವರ ಬದಲು ಒಬ್ಬ ಕೆಲಸದವಳಾದರೆ ಸಾಕು, ಬೆಳಿಗ್ಗೆ ಬರುತ್ತಾಳೆ, ಕೆಲಸ ಮುಗಿಸಿ ಹೋಗ್ತಾಳೆ. ಸಂಜೆ ಕೆಲಸದಿಂದ ಬಂದ ಮೇಲೆ ಜಯಾ ಅಡುಗೆಮನೇನಾ ಹೇಗೋ ಸಂಭಾಳಿಸಿಕೊಳ್ಳುತ್ತಾಳೆ. ಸುಮ್ಮ